**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-367/2023 **PW**-1

**ದಿಃ 22.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಪಿ ಎಂ ವಕೀಲರಿಂದಃ**

1. ನಾನು ಹತ್ತನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ರಾಘವೇಂದ್ರ ಕುಲಕರ್ಣಿ ನನ್ನ ತಂದೆಯಾಗಿರುತ್ತಾರೆ. ನಾವು ಮೂರು ಜನ ಮಕ್ಕಳು ಇರುತ್ತೇವೆ ಅವರೆಂದರೆ ಶ್ರೀಕಾಂತ, ಗಾಯತ್ರಿ, ಶಶಿಕಾಂತ ಆಗಿರುತ್ತಾರೆ. ಶ್ರೀಕಾಂತ ರವರ ಮದುವೆಯಾಗಿತ್ತು. ಅವರ ಮದುವೆಯು ತಾರಾಮತಿ ಎಂಬುವರ ಜೊತೆ ಆಗಿತ್ತು. ತಾರಾಮತಿ ರವರ ಸಹೋದರ ಸಹೋದರಿಯರು ಇರುತ್ತಾರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನನಗೆ ತಾರಾಮತಿ ರವರ ಕುಟುಂಬದವರ ಜೊತೆ ಹೆಚ್ಚಾಗಿ ಒಡನಾಟ ಇರದ ಕಾರಣ ಆಕೆಯ ಸಹೋದರ ಸಹೋದರಿಯರ ಬಗ್ಗೆ ಮಾಹಿತಿ ಇಲ್ಲ. ನನ್ನ ಸಂಬಂದವು ಶ್ರೀಕಾಂತ ಮತ್ತು ಅವರ ಹೆಂಡತಿ ಜೊತೆ ಉತ್ತಮವಾಗಿತ್ತು. ನಾನು ಅವರ ಮನೆಗೆ ಹೋಗಿ ಬಂದು ಮಾಡುತ್ತಿದ್ದೆ. ತಾರಾಮತಿ ರವರಿಗೆ 8 ಜನ ಸಹೋದರರು ಇದ್ದು ಅವರೆಲ್ಲರೂ ದಾರವಾಡದಲ್ಲಿರುತ್ತಾರೆಂದರೆ ಸಾಕ್ಷಿಯು ಅವರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಶ್ರೀಕಾಂತ ಮತ್ತು ತಾರಾಮತಿ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಆದಕಾರಣ ಇವರಿಬ್ಬರೂ ಎದುರುದಾರನನ್ನು ಸಬ್ ರಜಿಸ್ಟ್ರರ ಕಚೇರಿಯಲ್ಲಿ ನೋಂದಾವಣಿ ಕಾಗದದ ಮೇಲೆ ದತ್ತಕ ತೆಗೆದುಕೊಂಡಿರುತ್ತಾರೆಂದರೆ ಗೊತ್ತಿಲ್ಲ. ಎದುರುದಾರನೇ ಶ್ರೀಕಾಂತ ರವರ ಜೋಪಾನವನ್ನು ಮಾಡಿರುತ್ತಾರೆಂದರೆ ಸಾಕ್ಷಿಯು ಮಾಡಿಲ್ಲ ಎಂದು ಹಾಗೂ ತಾನು ಮಾಡಿರುತ್ತೇನೆಂದು ನುಡಿಯುತ್ತಾರೆ. ನಾನು ಸವದತ್ತಿಯಲ್ಲಿ ವಾಸವಾಗಿರುತ್ತೇನೆ.

2. ಸಾಮಾನ್ಯವಾಗಿ ಮರಣ ಹೊಂದಿದ ವ್ಯಕ್ತಿಯ ಸ್ವಗ್ರಾಮಕ್ಕೆ ತೆಗೆದುಕೊಂಡು ಹೋಗಿ ಅಂತ್ಯಕ್ರಿಯೇ ಮಾಡುತ್ತಾರೆಂದರೆ ಸರಿಯಲ್ಲ. ತಾರಾಮತಿ ರವರ ಅಂತ್ಯಕ್ರಿಯೇ ದಾರವಾಡದಲ್ಲಿ ಆಗಿರುತ್ತದೆ. ದಾರವಾಡದಲ್ಲಿ ನನಗೆ ಸಂಬಂದಿಕರು ಇರುತ್ತಾರೆ. ತಾರಾಮತಿ ರವರಿಗೆ 8 ಜನ ಸಹೋದರರು ಇದ್ದು ತಹಶೀಲದಾರವರಿಗೆ ಜೀವಂತ ಸದಸ್ಯರ ಪ್ರಮಾಣ ಪತ್ರ ಪಡೆಯುವಾಗ ಅವರ ಹೆಸರುಗಳನ್ನು ನಮೂದಿಸಿರುವದಿಲ್ಲ. ತಾರಾಮತಿ ರವರ ಸಹೋದರರು ದಾರವಾಡದ 1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ನಂಃ 219/2023 ನ್ನು ಸರಳ ವಾರಸಾದಾರರು ಎಂದು ಘೋಷಿಸಬೇಕೆಂದು ಕೇಸು ಮಾಡಿರುತ್ತಾರೆಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಆ ಪ್ರಕರಣದಲ್ಲಿ ನನಗೆ ಸಮನ್ಸ

ಬಂದಿರದ ಕಾರಣ ಹಾಜರಾಗಿರುವದಿಲ್ಲ. ಆ ದಾವೆಯಲ್ಲಿ ತಾವು ಏಕತರ್ಫಿಯಾಗಿರುತ್ತೀರಿ ಎಂದರೆ ಸಾಕ್ಷಿಯು ಸಮನ್ಸ ಬಂದಿಲ್ಲ ಎನ್ನುತ್ತಾರೆ. ನಿಪಿ 6 ನ್ನು ತಹಶೀಲದಾರವರು ನೀಡಿದ ದಾಖಲೆ ಎಂದರೆ ಸರಿ. ನಾನು ನೀಡಿದ ಮಾಹಿತಿಯಂತೆ ನಿಪಿ 6 ನ್ನು ತಹಶೀಲದಾರವರು ಕೊಟ್ಟಿರುತ್ತಾರೆಂದರೆ ಸರಿ. ಎದುರುದಾರನು ತಾರಾಮತಿ ಮತ್ತು ಶ್ರೀಕಾಂತ ರವರ ಮಗನಾಗಿರುವ ವಿಚಾರ ಗೊತ್ತಿದ್ದರೂ ಅವರನ್ನು ಸೇರಿಸದೇ ಸುಳ್ಳು ದಾಖಲೆಯನ್ನು ಸೃಷ್ಟಿಸಿ ಈ ಕೇಸನ್ನು ಮಾಡಿರುತ್ತೀರಿ ಎಂದರೆ ಸರಿಯಲ್ಲ. ಎದುರುದಾರರು ಬ್ಯಾಂಕ ಆಫ್ ಬರೋಡಾದ ಬ್ಯಾಂಕನ ಖಾತೆಗೆ ನಾಮಿನಿಯಾಗಿರುತ್ತಾರೆಂದರೆ ಗೊತ್ತಿಲ್ಲ. ಅದೇ ರೀತಿಯಾಗಿ ಶ್ರೀಕಾಂತ ರವರ ವಿಜಯ ಬ್ಯಾಂಕಗೂ ಎದುರುದಾರನು ಮಗನಾಗಿ ನಾಮಿನಿಯಾಗಿರುತ್ತಾರೆಂದರೆ ಗೊತ್ತಿಲ್ಲ. ಪಿ ಅಂಡ ಎಸ ಸಿ ಯನ್ನು ಯಾವ ಕಾರಣಕ್ಕಾಗಿ ಹಾಕುವ ಸಂದರ್ಬ ಬಂತು ಎಂದರೆ ಸಾಕ್ಷಿಯು ಮೃತ ಶ್ರೀಕಾಂತ ರವರು ನನ್ನ ಅಣ್ಣನಾಗಿರುವ ಕಾರಣ ಆತನ ಸರಳ ವಾರಸಾದಾರರು ನಾವೇ ಆಗಿರುವ ಕಾರಣ ಅರ್ಜಿ ಸಲ್ಲಿಸಲು ವ್ಯಾಜ್ಯ ಕಾರಣ ಉಂಟಾಯಿತು ಎನ್ನುತ್ತಾರೆ. ಬ್ಯಾಂಕನ ವ್ಯವಸ್ಥಾಪಕರು ತಮಗೆ ಮೃತ ವ್ಯಕ್ತಿಯ ಬ್ಯಾಂಕನಲ್ಲಿರುವ ಹಣ ಮತ್ತು ವಸ್ತುಗಳಿಗೆ ಎದುರುದಾರನನ್ನು ನಾಮಿನಿಯಾಗಿ ಮಾಡಿರುವ ಕಾರಣ ನ್ಯಾಯಾಲಯದಿಂದ ಆದೇಶವನ್ನು ಪಡೆದುಕೊಂಡು ಬರುವಂತೆ ತಿಳಿಸಿದ್ದು ಅದರಂತೆ ಪಿ ಅಂಡ ಎಸ ಸಿ ಹಾಕಿರುತ್ತೇವೆಂದರೆ ಸರಿಯಲ್ಲ. ನಾನು ನನ್ನ ಸಹೋದರ ಶ್ರೀಕಾಂತ ಮತ್ತು ಅವರ ಹೆಂಡತಿಯ ಅಂತ್ಯಕ್ರಿಯೇಗಳನ್ನು ಮಾಡಿದ್ದು ಅವರು ನನಗೆ ಯಾವದೇ ರೀತಿಯ ಬಕ್ಷೀಸನ್ನು ಮಾಡಿ ಕೊಟ್ಟಿರುವದಿಲ್ಲ. ತಾರಾಮತಿ ರವರು ನವನಗರದಲ್ಲಿ ಕಟ್ಟಿಸಿರುವ ಮನೆಯ ಬಾಡಿಗೆಯನ್ನು ಎದುರುದಾರನು ಪಡೆಯುತ್ತಿದ್ದಾರೆ. ಎದುರುದಾರನು ತಾರಾಮತಿ ಹಾಗೂ ಶ್ರೀಕಾಂತ ರವರ ಮಗನಾಗಿರುವ ಕಾರಣ ಆಸ್ತಿಯಲ್ಲಿ ಪಾಲು ಇರುವ ಕಾರಣ ಬಾಡಿಗೆಯನ್ನು ಆತನೇ ಪಡೆಯುತ್ತಾನೆಂದರೆ ಸಾಕ್ಷಿಯು ಮಗ ಎಂಬ ವಿಷಯ ಬಗ್ಗೆ ಗೊತ್ತಿಲ್ಲ ಎಂದು ಆದರೆ ಬಾಡಿಗೆ ಪಡೆಯುತ್ತಿದ್ದಾರೆಂದು ನುಡಿಯುತ್ತಾರೆ. ನಾವು ಎದುರುದಾರನ ಬಳಿ ಬಾಡಿಗೆಯನ್ನು ಕೊಡುವಂತೆ ಎಂದಿಗೂ ವಿಚಾರಿಸಿರುವದಿಲ್ಲ ಬದಲಿಗೆ ನ್ಯಾಯಾಲಯಕ್ಕೆ ಈ ದಾವೆ ಹಾಕಿರುತ್ತೇವೆ. ಎದುರುದಾರನು ತಾರಾಮತಿ ಶ್ರೀಕಾಂತ ರವರಿರಗೆ ದತ್ತಕ ಆಗಿರುವ ವಿಚಾರ ತಮಗೆ ಚೆನ್ನಾಗಿ ಗೊತ್ತಿದ್ದು ತಾವು ಅದರಲ್ಲಿ ಬಾಗವಹಿಸಿದರೂ ಎದುರುದಾರನ ಅನಕ್ಷರತೆಯನ್ನು ದುರುಪಯೋಗಪಡಿಸಿಕೊಂಡು ಹಾಗೂ ಆತನ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಈ ಸುಳ್ಳು ಪಿ ಅಂಡ ಎಸ್ ಸಿ ಯನ್ನು ಹಾಕಿರುತ್ತೀರಿ ಎಂದರೆ ಸರಿಯಲ್ಲ.

3. ಬ್ಯಾಂಕಗೆ ನಾನು ಹೋದಾಗ ಬ್ಯಾಂಕನವರು ತಮ್ಮ ಬಳಿ ಯಾರು ಎಂದು ವಿಚಾರಿಸಿರುತ್ತಾರೆಂದರೆ ಸಾಕ್ಷಿಯು ಆ ರೀತಿ ವಿಚಾರಿಸಿಲ್ಲ ಬದಲಿಗೆ ನ್ಯಾಯಾಲಯದಿಂದ ಆದೇಶ ಪಡೆದುಕೂಂಡು ಬರುವಂತೆ ತಿಳಿಸಿರುತ್ತಾರೆಂದು ನುಡಿಯುತ್ತಾರೆ. ಎದುರುದಾರನು ತಾರಾಮತಿ ರವರ ತಂಗಿಯ ಮಗ ಎಂದರೆ ಗೊತ್ತಿಲ್ಲ. ಎದುರುದಾರನು ತಾರಾಮತಿರವರ ತಂಗಿ ಮಗ ಎಂಬ ವಿಚಾರ ಗೊತ್ತಿದ್ದರೂ ಹಾಗೂ ಮೃತ ತಾರಾಮತಿ ರವರಿಗೆ 8 ಜನ

ಸಹೋದರರು ಇರುವ ವಿಚಾರ ಗೊತ್ತಿದ್ದರೂ ಅವುಗಳನ್ನೆಲ್ಲಾ ಮರೆಮಾಚಿ ಈ ಸುಳ್ಳು ದಾವೆಯನ್ನು ಮಾಡಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾರಾಮತಿ ರವರ ಸಹೋದರರು ಎದುರುದಾರನೇ ಮಗ ಎಂಬ ವಿಚಾರ ಗೊತ್ತಿರುವ ಕಾರಣ ಯಾವದೇ ತಕರಾರನ್ನು ಈ ಪ್ರಕರಣದಲ್ಲಿ ಸಲ್ಲಿಸಿರುವದಿಲ್ಲ ಎಂದರೆ ಸರಿಯಲ್ಲ. ಮೊದಲಿಗೆ ಶ್ರೀಕಾಂತ ರವರು ಮರಣ ಹೊಂದ್ದಿದು ನಂತರ ತಾರಾಮತಿ ರವರು ಮರಣ ಹೊಂದಿರುತ್ತಾರೆ. ಎದುರುದಾರನು ಮೃತ ವ್ಯಕ್ತಿಗಳ ವಾರಸಾದಾರರಾಗಿದ್ದು ತಾವು ಯಾವದೇ ರೀತಿಯಾಗಿ ಮೃತ ವ್ಯಕ್ತಿಗಳಿಗೆ ವಾರಸಾದಾರರು ಆಗಿರುವದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.